ಸಮಯವನ್ನು ಸಾರುತ್ತಿದ್ದ. ಆದರೆ, ಎದ್ದಮೇಲೂ ವಾಂತಿ ಬರುವ ಅನುಭವವಾಗಿ ದೊಡ್ಡವ್ವನನ್ನು ತಟ್ಟಿ ಎಬ್ಬಿಸಿದೆ. ದೊಡ್ಡವ್ವ ನಿದ್ದೆಯಲ್ಲೇ ಗೊಣಗುತ್ತ ಕಿಟಕಿ ಪಕ್ಕದ ಜಾಗದಿಂದ ಪಕ್ಕಕ್ಕೆ ಸರಿದಳು. ಆ ಕ್ಷಣ ಹೊಟ್ಟೆಯೊಳಗಿನ ವೇದನೆಯೂ ಒಂದು ರೀತಿಯಲ್ಲಿ ಖುಷಿಕೊಟ್ಟಿತು. ಹೊಟ್ಟೆಯೊಳಗಿರುವುದೆಲ್ಲ ಖಾಲಿಯಾದ ಮೇಲೆ ಉದಯಿಸುತ್ತಿರುವ ಸೂರ್ಯನನ್ನು ಸ್ವಾಗತಿಸುತ್ತಾ ಕುಳಿತೆ. ತಿರುವು ಮುರುವುಗಳನ್ನು ಹಿಂದಿಕ್ಕುತ್ತಾ ಸಾಗುತ್ತಿದ್ದ ಬಸ್ಸು, ಗದಗಿನ ಬಯಲುಭೂಮಿಯಿಂದ ಹಸಿರಿನ ಸಮೃದ್ಧತೆಯ ಮಲೆನಾಡಿಗೆ ತನ್ನದೇ ವೇಗದಲ್ಲಿ ಮುನ್ನುಗ್ಗುತ್ತಿತ್ತು. ಈ ಪರಿವರ್ತನೆಯನ್ನು ನೋಡುವ ಖುಷಿ ನನ್ನನ್ನು ಬಿಟ್ಟರೆ ಈ ಬಸ್ಸಿನ ಚಾಲಕನೂ ಅನುಭವಿಸುತ್ತಿರಬಹುದೇನೋ ಎಂಬ ಅನುಮಾನ ಕಾಡಿತು. ಆದರೆ, ದಿನವೂ ಇದೇ ದಾರಿಯಲ್ಲಿ ಸಂಚರಿಸುವ ಅವನಿಗೆ ಇದ್ಯಾವುದೂ ಹೊಸತನವನ್ನು ಕೊಟ್ಟಿರಲಾರದೆಂಬ ಸಂಶಯ ಬಂದು ಹೊರಗಿನ ಬೆಳಗನ್ನು ನೋಡುತ್ತಾ ಕುಳಿತೆ. ದಾರಿ ಸಾಗಿದಂತೆಲ್ಲ ಕಾಡು ದಟ್ಟವಾಗಿ, ದೊಡ್ಡ ದೊಡ್ಡ ಮರಗಳು ಇನ್ನೂ ದೈತ್ಯಾಕಾರವಾಗಿ ಗೋಚರಿಸಲು ತೊಡಗಿದವು. ಆಗಲೇ ಎರಡು ಮೂರು ಬಸ್ ನಿಲ್ದಾಣಗಳು ಬಂದು ಹೋಗಿದ್ದರೂ ದೊಡ್ಡವ್ವ ಎಚ್ಚರಗೊಂಡಿರಲಿಲ್ಲ. ಇದೆಲ್ಲ ಮಾಮೂಲಿಯೇನೊ ಎಂಬಷ್ಟು ಸಹಜವಾಗಿತ್ತು ಆಕೆಯ ವರ್ತನೆ. ವಾಂತಿಯಿಂದಾಗಿ ತೀರಾ ಸುಸ್ತಾಗಿದ್ದ ನಾನು, ಹಸಿವೆಯಿಂದಲೋ ಇಲ್ಲಾ ಮಲೆನಾಡಿನ ಚಳಿಯಿಂದಲೋ ಎಂಬಂತೆ ಸಣ್ಣದಾಗಿ ನಡಗುತ್ತಿದ್ದೆ. ಇದೇ ಸ್ಥಿತಿಯಲ್ಲಿ ಸ್ವಲ್ಪ ನಿದ್ದೆಗೆ ಜಾರಿದ್ದ ನಾನು, ಕಂಡಕ್ಟರಿನ ದೊಡ್ಡ ಸ್ವರದ ಸಿರ್ಸಿ ಸಿರ್ಸಿ ಎಂಬ ಕೂಗಿಗೆ ಎಚ್ಚರಗೊಂಡೆ. ನನ್ನಂತೆ ಬಸ್ಸಿನಲ್ಲಿದ್ದ ಎಲ್ಲರೂ ಎಚ್ಚರಗೊಂಡು ಮೈಮುರಿಯುತ್ತಿದ್ದರು. ಕಂಡಕ್ಟರ್ ಅದೇ ದೊಡ್ಡ ಸ್ವರದಲ್ಲಿ ಕೂಗುತಿದ್ದ. ''ಹತ್ತ್ ನಿಮಿಷ ಟೈಮ್ ಇದೆ ನೋಡಿ, ಯಾರಾದ್ರೂ ತಿಂಡಿ ಕಾಫಿ ಮಾಡೋರ್ ಇದ್ರೆ ಮಾಡ್ಕೊಳಿ'' ಎಂದು ಕಿರುಚುತ್ತಿದ್ದ. ನನ್ನ ಚೀಲವನ್ನು ಸೀಟ್ ಕಾಯಲು ಇರಿಸಿ, ದೊಡ್ಡವ್ವನೊಟ್ಟಿಗೆ ನಾನೂ ಬಸ್ಸಿನಿಂದಿಳಿದೆ. ಶೌಚಾಲಯಕ್ಕೆ ಹೋಗಿ ಬರುವಾಗ ದೊಡ್ಡವ್ವ ತನ್ನ ರವಿಕೆಯಿಂದ ಚಿಕ್ಕ ಪರ್ಸನ್ನು ತೆಗೆದು ಹತ್ತು ರೂಪಾಯಿಯ ಒಂದು ನೋಟನ್ನು ಅಲ್ಲಿ ಕುಳಿತಿದ್ದ ವ್ಯಕ್ತಿಯ ಕೈಗಿಟ್ಟಳು. ಚಿಲ್ಲರೆಗಾಗಿ ಕಾಯುತ್ತಿದ್ದ ದೊಡ್ಡವ್ವನಿಗೆ ಆತನ, ''ಸರಿಯಾಯ್ತು'' ಎಂಬ ಮಾತು ಸರಿಹೊಂದದೆ ದೊಡ್ಡದಾಗಿ ಗೊಣಗುತ್ತ ನೇರವಾಗಿ ಬಸ್ ಹತ್ತಲು ಹೊರಟಳು. ಮೊದಲೇ ಹಸಿದಿದ್ದ ನಾನು ತಿಂಡಿಯ ಬೇಡಿಕೆ ಇಟ್ಟಾಗ, ''ತಕಂಡ್ ಬತಾರೆ ಬಾ, ತಿಂದೆಲ್ಲಾ ವಾಂತಿ ಮಾಡಾಕ್ ನಿಂಗ್ಯಾಕ್ ತಿಂಡಿ'' ಎಂದು ಹೇಳುತ್ತಲೇ ಬಸ್ಸಿನಲ್ಲಿ ಕುಳಿತಳು. ಈ ಬಾರಿ ಕಿಟಕಿ ಪಕ್ಕದ ಜಾಗ ನನಗಾಗೇ ಮೀಸಲಿಟ್ಟಿತ್ತು. ''ಘಂಟೆ ಹತ್ತಾಯ್ತು, ಮದ್ವಿ ಮುಗ್ದ್ ಹೋಗದಿಲ್ಲೇನು'' ಎಂದು ಕೇಳಿದ ನನಗೆ ಅದಕ್ಕೆ ಸಿಕ್ಕ ಉತ್ತರ ಒಳಗಿನಿಂದ ಭಯವನ್ನು ಹುಟ್ಟಿಸಿತು. ''ಮುಗ್ದುಹೋಗಾಕ್ ಅದೇನ್ ಬೇರೆ ಮದ್ವಿಯೇನು? ನಾವ್ ಹೋಗ್ಬೇಕು... ಮದ್ವಿ ಆಗ್ಬೇಕು...'' ಎಂದು ಹೇಳಿದ ದೊಡ್ಡವ್ವ ಯಾವುದೇ ತಲೆಬಿಸಿ ಇಲ್ಲದೆ ಉಪ್ಪಿಟ್ಟನ್ನು ತಿನ್ನುತಿದ್ದಳು. ಬಹುಶಃ ದೊಡ್ಡವ್ವನ ಹತ್ತಿರದ ಸಂಬಂಧಿಕರಿರಬೇಕು, ಅದಕ್ಕಾಗಿಯೇ ನಮಗೆ ಕಾಯಬಹುದೆಂದು ಮನಸ್ಸಿಗೆ ಸಮಾಧಾನ ಹೇಳಿದರೂ ನನ್ನ ಭಯ ಹಾಗೆ ಇತ್ತು. ಮತ್ತೆ ಕುಮಟಾ – ಮಂಗಳೂರ್ ಎಂಬ ಕೂಗಿನೊಂದಿಗೆ ಹೊರಟ ನಮ್ಮ ಬಸ್ಸು, ತಿರುವು ಮುರುವು ರಸ್ತೆಗಳಲ್ಲಿ ಚಲಿಸುತ್ತಾ, ಮತ್ತೆ ಮತ್ತೆ ನನ್ನ ಹೊಟ್ಟೆಯನ್ನು ಖಾಲಿ ಮಾಡಿಸುತ್ತಾ ಸಾಗಿತು.

ಅಂತೂ ಸರಿಯಾಗಿ ಹನ್ನೆರಡು ಮುಕ್ಕಾಲಿಗೆ ಕುಮಟಾ ಎಂಬ ಊರು ತಲುಪಿದ ನಾವು, ಬಸ್ಸಿಂದ ಇಳಿದು ನೇರವಾಗಿ ನಿಲ್ದಾಣದ ಹೊರಕ್ಕೆ ಬಂದೆವು. ಅಲ್ಲಿ ನಮಗಾಗಿ ಕಾಯುತ್ತಿದ್ದ ಓಮಿನಿಯ ಚಾಲಕ ಕೈ ಬೀಸುತ್ತಿರುವುದು ಮಾವನಿಗೆ ಕಾಣಿಸಿ, ನಾವೆಲ್ಲ ಅವನನ್ನು ಹಿಂಬಾಲಿಸಿ ಓಮಿನಿಯ ಒಳ ಸೇರಿದೆವು. ಚಾಲಕನ ಪಕ್ಕ ಕುಳಿತ ಮಾವ ನಮ್ಮ ಪ್ರಯಾಣದ ವಿವರವನ್ನು ಒಪ್ಪಿಸುತ್ತಿದ್ದರೆ, ಹಿಂದಿನ ಸೀಟಿನ ಮಧ್ಯದಲ್ಲಿ ನಾನು ಮುದುಡಿ ಕುಳಿತಿದ್ದೆ. ಅವ್ವ ಕೊಟ್ಟಿದ್ದ ಬಿಳಿ ಕರವಸ್ತ್ರ ಕೈಯಲ್ಲಿ